ದಿನಗಳಲ್ಲಿ ಅಪ್ಪ ಸುದ್ದಿ ತಂದಿದ್ದ: ''ರಾಜ ಆಫೀಸಿನ ಲಾಕರ್ ಒಡೆದು, ದುಡ್ಡು ತೆಗೆದುಕೊಂಡು ಓಡಿಹೋಗಿದ್ದಾನೆ.''

ನನ್ನ ಕನಸು ಭವಿಷ್ಯವನ್ನೇ ತೋರಿಸಿತ್ತು. ಹೀಗೇಕೆ ಕನಸು ಬಿತ್ತು ಎಂಬುದು ವಿಸ್ಮಯವೇ. ಈ ಕನಸಿನ ಕುರಿತು ಹೇಳ ಹೊರಟರೆ, ಅಪ್ಪ ಅಮ್ಮ ಜೋರಾಗಿ ನಕ್ಕು ಬಿಟ್ಟರು. ಇಂಥ ಕನಸುಗಳು ಯಾವ ಕಾರಣಕ್ಕೆ ಬೀಳುತ್ತವೋ! ಏಕೆಂದರೆ, ನನ್ನ ಕನಸನ್ನು ಯಾರೂ ಗಂಭೀರವಾಗಿ ತೆಗೆದುಕೊಳ್ಳಲಿಲ್ಲ. ಹೀಗೆ ಮುಂದೆ ಆಗುವುದನ್ನು ಹೇಳುವ ಕನಸುಗಳಿಗೆ 'ಪ್ರಿ ಕಾಗ್ನಿಟಿವ್' ಕನಸುಗಳು ಎಂದು ಹೆಸರು. ಇಂಥದೊಂದು ಕನಸು ಕಂಡ ನನಗೆ ಸಿಕ್ಸ್ತ್ ಸೆನ್ಸ್ ಏನಾದ್ರೂ ಜಾಗೃತವಾಗಿತ್ತೆ? ನಾನೇನಾದರೂ ಇನ್ನೂ ನನ್ನ ಶಕ್ತಿಗಳನ್ನು ಅರಿಯದ ಸೂಪರ್ ವುಮೆನ್ ಇರಬಹುದೇ ಎಂದು ಬಹಳಷ್ಟು ಬಾರಿ ಹಗಲುಗನಸು ಕಂಡಿದ್ದೇನೆ!

ನಾವು ಏನೋ ಆಗಬೇಕು ಎಂದು ಕನಸು ಕಂಡು ಅದರ ಬಗ್ಗೆ ಏನೂ ತಯಾರಿ ನಡೆಸದೆ ಹೋದರೆ ಅದೊಂದು ಹಗಲುಗನಸಾಗಿಯೇ ಉಳಿಯುತ್ತದೆ. ಸಿನಿಮಾದ ಹೆಚ್ಚಿನ ಹಾಡುಗಳು ಇರುವುದು ಹಗಲುಗನಸುಗಳಲ್ಲೇ! ಕ್ಲಾಸಿನಲ್ಲಿ ಇಷ್ಟವಾಗದ ಪಾಠ ನಡೆಯುತ್ತಿದ್ದಾಗ, ಬಸ್ಸಿನಲ್ಲಿ ಕೂತು ಕಿಟಕಿಯಾಚೆ ನೋಡುವಾಗ ನಾನು ಹಗಲುಗನಸು ಕಾಣುವುದು ಹೆಚ್ಚು.

ವಿಮಾನದಲ್ಲಿ, ಕಾರಿನಲ್ಲಿ ಎಷ್ಟೇ ಓಡಾಡಿದರೂ ಬಸ್ಸಿನಲ್ಲಿ ಕಿಟಕಿ ಸೀಟ್ ಸಿಕ್ಕಾಗ ಆಗುವ ಖುಷಿಯೇ ಬೇರೆ! ಹೀಗೆ ಕಿಟಕಿಯಾಚೆ ನೋಡುತ್ತಾ ಕೂತು ಕನಸು ಕಾಣುತ್ತಾ ಒಮ್ಮೆ ನಾನು ನನ್ನ ಕಾಲೇಜು ಸ್ಟಾಪಿನಲ್ಲಿ ಇಳಿಯದೆ ಸೀದಾ ಎಲೆಕ್ಟ್ರಾನಿಕ್ ಸಿಟಿಗೆ ಹೋಗಿದ್ದೆ!

ಕನಸು ಕಾಣಲು ನಿದ್ರೆ ಬೇಕು, ಆದರೆ ಕನಸನ್ನು ಗ್ರಹಿಸಲು ಎಚ್ಚರವಾಗಿರಬೇಕು! ಇನ್ನು ಬೆಳಗ್ಗೆ ಬೀಳುವ ಕನಸುಗಳು ನಿಜವಾಗುತ್ತವೆ ಎಂಬ ನಂಬಿಕೆ ಅನೇಕರಲ್ಲಿದೆ. ನನಗೆ ಕನಸು ಬೆಳಗ್ಗೆ ಬಿದ್ದಿದ್ದೋ ರಾತ್ರಿ ಬಿದ್ದಿದ್ದೋ ಎಂದು ಖಂಡಿತ ತಿಳಿಯುವುದಿಲ್ಲ. ಕೆಲವರು ಕನಸುಗಳನ್ನು ಬರೆದಿಡುತ್ತಾರಂತೆ. ನಾನು ಹಾಗೆ ಕನಸುಗಳನ್ನು ಬರೆದಿಡುವ ಪ್ರಯತ್ನ ಮಾಡಿಲ್ಲ. ಆಗ ನಮಗೆ ಬೀಳುವ ಕನಸುಗಳಿಗೆ ಏನಾದರು ಮಾದರಿ (ಪ್ಯಾಟರ್ನ್) ಇದ್ದರೆ ಖಂಡಿತ ತಿಳಿಯಬಹುದು! ಕಾಲೇಜು ಓದುವಾಗ ನನ್ನ ಒಬ್ಬಳು ಸ್ನೇಹಿತೆ ಹೇಳುತ್ತಿದಳು: ಅವಳ ಕನಸುಗಳು ಮುಂದುವರೆಯುತ್ತಿದ್ದವಂತೆ! ಅಂದರೆ, ಇಂದು ಕಂಡ ಕನಸಿನ ಮುಂದುವರೆದ ಭಾಗ ಮುಂದೆಂದೋ ಬರುತ್ತಿತ್ತಂತೆ. ಎರಡು ಮೂರು ದಿನಗಳ ಹಿಂದೆ ಬಿದ್ದ ಕನಸಿನ ಮುಂದಿನ ಭಾಗ ಹಿಂದಿನ ರಾತ್ರಿಯ ಕನಸಲ್ಲಿ ಬರುತ್ತಿತ್ತು! ಅವಳ ಸ್ವಭಾವವನ್ನು ನೋಡಿದರೆ ಸುಮ್ಮನೆ ಕತೆ ಕಟ್ಟಿ ಹೇಳುತ್ತಿದ್ದಳು ಎಂದು ಹೇಳುವ ಹಾಗಿರಲಿಲ್ಲ. ಈ ಧಾರಾವಾಹಿ ಕನಸುಗಳಿಗೆ ನಾನು ಪ್ರತಿದಿನದ ಕೇಳುಗಳಾಗಿದ್ದೆ. ಅಬ್ಬಾ! ಇದೆಂಥ ಶಕ್ತಿ! ಕನಸೂ ಮುಂದುವರೆಯುತ್ತದೆ ಅಂದರೆ ಅದಕ್ಕೆ ಒಬ್ಬ ನಿರ್ದೇಶಕ ಇರಲೇ ಬೇಕು!

ಕನಸುಗಾರ ಅಂದರೆ ನನಗಂತೂ ನೆನಪಾಗುವುದು ನಟ, ನಿರ್ದೇಶಕ ರವಿಚಂದ್ರನ್! ಅವರ ಕ್ರಿಯಾಶೀಲ ಸಿನಿಮಾ ಸೆಟ್‌ಗಳು ಆಗ 'ಟ್ರೆಂಡ್ ಸೆಟ್ಟರ್' ಆಗಿದ್ದವು. ಈಗಲೂ 'ಕಿಂದರಿಜೋಗಿ' ಸಿನಿಮಾ ನೋಡಿದರೆ ಅದರಲ್ಲಿ ಕಿಂದರಿಜೋಗಿಯ ಜಗತ್ತು ಕಣ್ಣಿಗೆ ಹಬ್ಬ ಮಾಡುತ್ತದೆ. ಅಂದಮೇಲೆ ಕನಸಿಗೂ ಕ್ರಿಯಾಶೀಲತೆಗೂ ಹತ್ತಿರದ ಸಂಬಂಧವೇ ಇದೆ. ನಾವು ನಿದ್ದೆಯಲ್ಲಿ ಕಾಣುವ ಕನಸುಗಳು ನಮ್ಮ ಸುಪ್ತ ಮನಸ್ಸಿನ ಕ್ರಿಯಾಶೀಲತೆಯನ್ನೇ ತೋರುತ್ತವೆ ಎಂಬುದು ನನ್ನ ಶೋಧನೆ. ಕೆಲವು ಕನಸುಗಳು ನಮ್ಮ ಮಾನಸಿಕ ಸ್ಥಿತಿಯನ್ನೂ ಸೂಚಿಸಬಹುದು. ಪವನ್‌ಕುಮಾರ್ ನಿರ್ದೇಶನದ 'ಲೂಸಿಯಾ' ಸಿನಿಮಾ ಕನಸು ಮತ್ತು ವಾಸ್ತವದ ಮಧ್ಯೆ ಇರುವ ತೆಳುವಾದ ಗೆರೆಯನ್ನು ಸುಂದರವಾಗಿ ತೋರಿಸುತ್ತದೆ. ಇನ್ನು ಹಾಲಿವುಡ್‌ನ ಕ್ರಿಸ್ಟೋಫರ್ ನೋಲನ್ ಅವರ ಸಿನಿಮಾ 'ಇನ್ಸೆಪ್ಷನ್' ಅನೇಕರಿಗೆ ಗೊತ್ತಿರಬಹುದು. ಈ ಸಿನಿಮಾ ನಾಯಕನಿಗೆ ಇನ್ನೊಬ್ಬರ ಕನಸಿನೊಳಗೆ